ಶ್ರೀಧೂಮಾಲಕ್ಷ್ಮೀನರಸಿಂಹೋ ವಿಜಯತೇ

ಶ್ರೀಶ್ರೀಮದಲಗಟ್ಟಿಪ್ರಾಣರಾಜೋ ವಿಜಯತೇ

ಕುಲದೇವತಾ ಶ್ರೀತುಳಜಾಭವಾನೀ ವಿಜಯತೇ

ಶ್ರೀಸತ್ಯವೀರತೀರ್ಥಗುರುರಾಜಾ ವಿಜಯಂತೇ

ಶ್ರೀಗುರುಭ್ಯೋ ನಮ:

ಸ ಹಿ ಸರ್ವಮನೋವೃತ್ತಿಪ್ರೇರಕ:

# ಮಾಧ್ವರ ಕರ್ತವ್ಯವೇನು?

ಮನುಷ್ಯನಾಗಿ ಹುಟ್ಟಿದವನಿಗೆ ವಿವೇಕ, ಮಾನವೀಯತೆ ಎಷ್ಟು ಮುಖ್ಯವೋ, ಬ್ರಾಹ್ಮಣನಾದವನಿಗೆ ಸಂಧ್ಯಾವಂದನಾದಿಸತ್ಕರ್ಮಗಳು, ವೇದಾಧ್ಯಯನವು ಎಷ್ಟು ಅನಿವಾರ್ಯವೋ, ಸುಮಂಗಲೀಸ್ತ್ರೀಯರಿಗೆ ಅರಿಶಿನ ಕುಂಕುಮ ಮುಂತಾದ ಸೌಭಾಗ್ಯದ್ರವ್ಯಗಳು ಎಷ್ಟು ಅನಿವಾರ್ಯವೋ, ಅದೇ ರೀತಿ **ಮಾಧ್ವನಾಗಿ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಗೂ ಸರ್ವಮೂಲಗಳ ಜ್ಞಾನ, ಅದರಲ್ಲಿ ಹೇಳಿರುವಂತೆ ಅನುಷ್ಠಾನವು ಅತ್ಯಂತ ಅನಿವಾರ್ಯವಾದುದ್ದು.** ಹಾಗಾಗಿ ಸರ್ವಮೂಲಗ್ರಂಥಗಳ ಪರಿಚಯವನ್ನು ಯಥಾಶಕ್ತಿಯಾಗಿ ಮಾಡಿಕೊಳ್ಳೋಣ.

## ‘ಸರ್ವಮೂಲಗ್ರಂಥಗಳು’ ಅಂದರೇನು?

ಸಾಮಾನ್ಯವಾಗಿ ಎಲ್ಲರೂ **ಸರ್ವಮೂಲಗ್ರಂಥಗಳು** ಎಂಬ ಶಬ್ದವನ್ನು ಕೇಳಿರುತ್ತೇವೆ. ಆದರೆ ಅದರ ಅರ್ಥವೇನು? ಎನ್ನುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಅದನ್ನು ಇಲ್ಲಿ ತಿಳಿದುಕೊಳ್ಳೋಣ. ನಮ್ಮೆಲ್ಲರ ಗುರುಗಳಾದ, ಪರಮಾತ್ಮನಿಗೆ ಅತ್ಯಂತಪ್ರೀತಿಪಾತ್ರರಾದ, ಶ್ರೀಮುಖ್ಯಪ್ರಾಣದೇವರ

ಅವತಾರವಾದ ಶ್ರೀಮದಾಚಾರ್ಯರು ರಚಿಸಿರುವ ಗ್ರಂಥಗಳನ್ನು **ಸರ್ವಮೂಲಗ್ರಂಥಗಳು** ಎಂದು ಜ್ಞಾನಿಗಳು ಕರೆಯುತ್ತಾರೆ.

## ಶ್ರೀಮದಾಚಾರ್ಯರು ರಚಿಸಿದ ಗ್ರಂಥಗಳನ್ನು ಸರ್ವಮೂಲ ಎಂದು ಕರೆಯಲು ಏನು ಕಾರಣ?

ಆಚಾರ್ಯಕೃತಗ್ರಂಥಗಳನ್ನು **ಸರ್ವಮೂಲ** ಎಂದು ಕರೆಯಲು, ಈ ಐದು ಅರ್ಥಗಳನ್ನು ಕಾರಣಗಳನ್ನಾಗಿ ಚಿಂತಿಸಬಹುದು..(ಇನ್ನು ಹಲವಾರು ಅರ್ಥಗಳು ಇರುತ್ತವೆ. ನನಗೆ ಕಂಡದ್ದನ್ನು ಹೇಳಿದ್ದೇನೆ.)

೧) **ಸರ್ವಾಣಿ (ವೇದಾದೀನಿ) ಮೂಲಾನಿ ಯೇಷಾಂ ತೇ ಸರ್ವಮೂಲಾ:** ಎಲ್ಲಾ ಮೂಲ ಗ್ರಂಥಗಳ, ಅಂದರೆ ವೇದ, ಮಹಾಭಾರತ, ಪುರಾಣ, ಪಂಚರಾತ್ರ, ಇತ್ಯಾದಿ ಅನೇಕ ಗ್ರಂಥಗಳ ಆಧಾರದಲ್ಲಿ ನಿರ್ಮಿತವಾಗಿರುವ ಗ್ರಂಥಗಳು. ಆದ್ದರಿಂದ **ಸರ್ವಮೂಲಗಳು.**

೨) **ಸರ್ವೇಷಾಂ (ಟೀಕಾದೀನಾಂ) ಮೂಲಭೂತಾ: ಗ್ರಂಥಾ:** ಅಂದರೆ ಎಲ್ಲಾ ಗ್ರಂಥಗಳಿಗೂ ಆಧಾರವಾಗಿರುವ ಗ್ರಂಥಗಳು. ವಿಷ್ಣುತೀರ್ಥರು ಪದ್ಮನಾಭ-ತೀರ್ಥರು, ತ್ರಿವಿಕ್ರಮಪಂಡಿತಾಚಾರ್ಯರು ನಾರಾಯಣಪಂಡಿತಾಚಾರ್ಯರು, ಟೀಕಾಚಾರ್ಯರು, ಚಂದ್ರಿಕಾಚಾರ್ಯರೇ ಮೊದಲಾದ ಸಮಸ್ತಜ್ಞಾನಿಗಳು ರಚಿಸಿರುವ ಗ್ರಂಥಗಳಿಗೆ ಆಧಾರವಾಗಿರುವ ಗ್ರಂಥಗಳು. ಆದ್ದರಿಂದ **ಸರ್ವಮೂಲ ಗ್ರಂಥಗಳು.**

೩) **ಸರ್ವೇಷಾಂ (ತತ್ವಾನಾಂ) ಮೂಲಭೂತಾ: (ಜ್ಞಾನಕಾರಣೀಭೂತಾ:) ಗ್ರಂಥಾ:** ಅಂದರೆ ತತ್ವಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಿಗೂ ಮೂಲವಾದ

ಅಂದರೆ ಆ ವಿಷಯಗಳನ್ನು ತಿಳಿಸಿಕೊಡುವ ಗ್ರಂಥಗಳು. ಆದ್ದರಿಂದ **ಸರ್ವಮೂಲಗಳು**.

೪) **ಸರ್ವೇಷಾಂ (ಜೀವನಾಂ, ವಿಶೇಷತಃ ಸಜ್ಜನಾನಾಂ) ಮೂಲಭೂತಾ: ಸ್ವರೂಪಯಥಾರ್ಥಜ್ಞಾನಪ್ರದಾ:)** ಎಲ್ಲಾ ಜೀವರಾಶಿಗಳಿಗೂ ವಿಶೇಷವಾಗಿ ಸಜ್ಜನರಿಗೆ ಆಧಾರವಾಗಿರುವ, ಅಂದರೆ ತತ್ವಜ್ಞಾನವನ್ನು ನೀಡಿ ರಕ್ಷಿಸುವ ಗ್ರಂಥಗಳು. ಆದ್ದರಿಂದ **ಸರ್ವಮೂಲಗಳು.**

೫) **ಸರ್ವ: ಮೂಲಂ ಯೇಷಾಂ ತೇ ಸರ್ವಮೂಲಾ:** ಸರ್ವಶಬ್ದವಾಚ್ಯನಾದ ಭಗವಂತನೇ ಮೂಲವಾಗಿವುಳ್ಳ ಗ್ರಂಥಗಳು. ಅಂದರೆ ಈ ಗ್ರಂಥಕ್ಕೆ ಎಲ್ಲ ರೀತಿಯಿಂದಲೂ ಮೂಲವಾಗಿರುವುದು, ಆಧಾರವಾಗಿರುವುದು ಭಗವಂತನೇ. ಪ್ರತಿಪಾದ್ಯನಾಗಿ, ಗ್ರಂಥಕರ್ತೃಪ್ರೇರಕನಾಗಿ, ಬಾಹ್ಯವಾಗಿಯೂ ಗ್ರಂಥರಚನೆ ಪ್ರೇರಣೆಯನ್ನು ನೀಡುವವನು. ಇನ್ನು ಅನೇಕರೀತಿಯಲ್ಲಿ ಪರಮಾತ್ಮನೇ ಇವುಗಳಿಗೆ ಮೂಲ. ಆದ್ದರಿಂದ ಇವು **ಸರ್ವಮೂಲಗ್ರಂಥಗಳು**.

ಹೀಗೆ ಸರ್ವವಿಧದಿಂದಲೂ ಭಗವಂತನನ್ನೇ ಮೂಲವನ್ನಾಗಿ ಪಡೆದ, ಎಲ್ಲಾ ಮೂಲಗ್ರಂಥಗಳನ್ನೂ ಮೂಲವನ್ನಾಗಿ ಪಡೆದ, ಎಲ್ಲಾ ಟೀಕೆ-ಟಿಪ್ಪಣಿಗಳಿಗೂ ಮೂಲವಾಗಿರುವ, ಸರ್ವಪ್ರಮೇಯಗಳನ್ನು ತಿಳಿಸಿಕೊಡುವ, ಸರ್ವಸಜ್ಜನರಿಗೆ ಹಿತೈಷಿಯಾದ, ಸರ್ವಮೂಲಗ್ರಂಥಗಳನ್ನು ಓದಿ, ಅಲ್ಲಿ ಹೇಳಿದ ವಿಷಯವನ್ನು ತಿಳಿದು, ಯಾರು ತಮ್ಮ ಜೀವನದಲ್ಲಿ ಅಳವಡಿಸಿ-ಕೊಳ್ಳುತ್ತಾರೋ, ಅವರ ಜೀವನವೇ ನಿಜವಾಗಿ ಧನ್ಯ. ಗುರುಗಳು, ಆಚಾರ್ಯರು, ವೇದವ್ಯಾಸದೇವರು ಆ ಸೌಭಾಗ್ಯವನ್ನು ನಮಗೆ ನೀಡಲಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಮುಂದಿನ ಲೇಖನಸರಣಿಗಳಲ್ಲಿ ಶ್ರೀಚಂದ್ರಿಕಾಚಾರ್ಯರು ಗ್ರಂಥಮಾಲಿಕಾಸ್ತೋತ್ರದಲ್ಲಿ ತಿಳಿಸಿರುವಂತೆ ಆಚಾರ್ಯರ ಗ್ರಂಥಗಳ ಪರಿಚಯವನ್ನು ಮಾಡಿಕೊಳ್ಳೋಣ.

**ಶ್ರೀಕೃಷ್ಣಾರ್ಪಣಮಸ್ತು**

**ಭೂಯಾತ್ತತ್ವವಿನಿರ್ಣಯಾಯ ಭಗವಾನ್ ಆನಂದತೀರ್ಥೋ ಮುನಿ:**

**ಶ್ರೀನಿವಾಸ ಕೊರ್ಲಹಳ್ಳಿ**